ಟಿಪ್ಪಣಿ ಹಾಳೆ

ವಿಷಯ Providing and Maintenance of borewells and supply pelaliens ಪುಟದ ಸಂಖ್ಯೆ (1)

ಕಡತದ ಸಂಖ್ಯೆ AEE/Yxu.I/447/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:- Providing and Maintenance of borewells and water supply pipelines at Ananthpura village, Balaji layout, DUO Marvel, Prakruthi Layout, Ananthpura and surrounding areas in ward no 03, Attur

******

1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ಯಲಹಂಕ ಉಪನಗರ ಉಪವಿಭಾಗ, ಅಟ್ಟೂರು, ವಾರ್ಡ್ ನಂ:03 ರಲ್ಲಿ ಬರುವ ಅನಂತಪುರ, ಬಾಲಾಜಿ ಬಡಾವಣೆ, ಡಿಯೋ ಮಾರ್ವಲ್ ಬಡಾವಣೆ, ಪ್ರಕೃತಿ ಬಡಾವಣೆ ಮತ್ತು ಅನಂತಪುರ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಜನಸಾಂದ್ರತೆ ಹೆಚ್ಚಾಗಿದ್ದು ನೀರಿನ ಅಭಾವ ಉಂಟಾಗಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೋರ್‌ವೆಲ್ ಮುಖಾಂತರ ಕುಡಿಯುವ ನೀರನ್ನು ಒದಗಿಸಬೇಕಾಗಿರುತ್ತದೆ. ಆದುದರಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರು ಸದರಿ ಕಾಮಗಾರಿಯನ್ನು 2019-20ನೇ ಸಾಲಿನ ಪಿ.ಓ.ಡಬ್ಲ್ಯೂ ಕಾರ್ಯಕ್ರಮದಲ್ಲಿ ಸೇರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿರುತ್ತಾರೆ.

ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2019-20ನೇ ಸಾಲಿನ ಪಿ.ಓ.ಡಬ್ಲ್ಯೂ ಕಾರ್ಯಕ್ರಮದಡಿಯಲ್ಲಿ ರೂ.20.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

2) 1. ಭೂ ಗರ್ಭ ಶಾಸ್ತ್ರಜ್ಞರಿಂದ ಕೊಳವೆ ಬಾವಿಯ ಗುರುತು ಮಾಡುವುದು.
2. ಕೊಳವೆ ಬಾವಿಯನ್ನು ಕೊರೆಸುವುದು.
3. ಉತ್ತಮ ಗುಣ ಮಟ್ಟದ ಕೇಸಿಂಗ್ (ಸಿ.ಐ.) ಪೈಪ್ ಅಳವಡಿಸುವುದು.
4. ಉತ್ತಮ ಗುಣಮಟ್ಟದ ಪಿ.ವಿ.ಸಿ ಕೇಸಿಂಗ್ ಅಳವಡಿಸುವುದು.
5. ಪಂಪ್‌ಸೆಟ್ ಮತ್ತು ಮೋಟಾರ್ ಅಳವಡಿಸುವುದು.
6. ಉತ್ತಮ ಗುಣಮಟ್ಟದ ಐ.ಎಸ್.ಐ ಮಾರ್ಕ್ ಜಿ.ಐ ಪೈಪ್ ಅಳವಡಿಸುವುದು.
7. ಪಂಪ್ ಹಾಗೂ ಮೋಟಾರ್‌ಗೆ ಬೇಕಾಗುವ ಸಾಮಾಗ್ರಿಗಳು, ಕೇಬಲ್ ವಯರ್‌ಗಳು ಇತ್ಯಾದಿ., ಒದಗಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಅದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ 2019-20ನೇ ಸಾಲಿನ ಪಿ.ಓ.ಡಬ್ಲ್ಯೂ ಕಾರ್ಯಕ್ರಮದ ಪಿ-1771 ರ ಅಡಿಯಲ್ಲಿ 0Q3-00-000345 ರಂತೆ ಕಾಮಗಾರಿಯ ಸಂಕೇತ ದೊರೆತಿದ್ದು ಕೆಲಸವನ್ನು ತುರ್ತಾಗಿ ಕೈಗೆದುಕೊಳ್ಳಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

3) ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ. ಬೆಂಗಳೂರು - 64 447 ಯಲಹಂಕ ಉಪನಗರ ಉಪವಿಭಾಗ

ಸ.ಅ (ವಾರ್ಡ್-ನಂ03)

ಸ.ಕಾ.ಅ (ಯ.ಉ.ವಿ)

4) ಸ.ಅ (ಯ.ಉ.ವಿ)

ಸಹಾಯಕ ಅಭಿಯಂತರರು 1288 2019

ಸಂಖ್ಯೆ

(5) ಕಂಡಿಕೆ (3) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2019–20ನೇ ಸಾಲಿನ (ಪಿ.ಓ.ಡಬ್ಲ್ಯೂ ಕಾಮಗಾರಿಗಳಿಗೆ) ವಾರ್ಷಿಕ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–1771ರ ಅನುದಾನದಡಿ ಮಂಜೂರಾಗಿರುವ ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ನಂ–03ರ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆ ಮಾಡಲು ಹೊಸದಾಗಿ ಕೊಳವೆಬಾವಿ ಕೊರೆಯುವುದು ಹಾಗು ಈಗಾಗಲೇ ಕೊರೆದಿರುವ ಕೊಳವೆಬಾವಿಗಳ ನಿರ್ವಹಣೆ ಕೆಲಸ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್ ದರಪಟ್ಟಿಯನ್ನು ಹಾಗೂ ಆರ್.ಡಿ.ಇ.ಡಿ ಎಸ್.ಆರ್ ಅನುಸರಿಸಿ ರೂ. 20.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ ದೊರೆತಿದ್ದು, ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ :ಬಿ12(1) ಪಿ.ಆರ್/394/2019–20 ದಿನಾಂಕ:25–2–2019 ರಂತೆ ನೀಡಿರುವ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆ ಕೋರಿ ಕಡತವನ್ನು ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(6) ಮುಖ್ಯ ಅಭಿಯಂತರರು (ಯ.ವ)

(7) ಕಂಡಿಕೆ 1 ರಿಂದ 04 ರವರೆಗಿನ ವರದಿಯನ್ನು ತಮ್ಮ ಅವಗಾಹನೆಗ ಸಲ್ಲಿಸಿದೆ. Providing and maintenance of borewells water supply and pipelings at Ananthapura and surrounding areas in ward no- Attru ಕಾಮಗಾರಿಯನ್ನು ನಿರ್ವಹಿಸಲು ರೂ20.00 ಲಕ್ಷಗಳಿಗೆ 2019–20ನೇ ಸಾಲಿನ ಪಿ–1771ರ ಅಡಿಯಲ್ಲಿ ಜಾಬ್ ಸಂಕೇತ:003–20–000245 ದೊರೆತಿದ್ದು, ಕಾರ್ಯಪಾಲಕ ಅಭಿಯಂತರರು (ಯಲಹಂಕ) ರವರು ಪ್ರಸ್ತಾಪಿತ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಕಡತ ಸಲ್ಲಿಸಿರುತ್ತಾರೆ.

(8) ಸದರಿ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ಅಥವಾ ಯಾವುದೇ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರದ ಬಗ್ಗೆ ಪರಿಶೀಲಿಸಿಕೊಂಡು Overlap ಆಗದಂತೆ ಹಾಗೂ ದಿನಾಂಕ:13–12–2019ರ ಮಾನ್ಯ ಆಯುಕ್ತರು ರವರ ಆದೇಶದನ್ವಯ ಅಂದಾಜು ಪಟ್ಟಿಯಲ್ಲಿ ಅಗತ್ಯ ಅಂಶಗಳನ್ನು ಅಳವಡಿಸಿಕೊಂಡು ಸೂಕ್ತ ಕ್ರಮವಹಿಸಿ, ಪ್ರಸ್ತಾಪಿತ ಕಾಮಗಾರಿಗಳನ್ನು ನಿಮಯಾನುಸಾರ ಅನುಷ್ಠಾನಗೊಳಿಸಲು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರಿಗೆ ಸೂಚಿಸಲಾಗಿದ್ದು, ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ ಬಿ12(1)ಪಿಆರ್/394/2019–20,ದಿನಾಂಕ:25–09–2019ರಂತೆ ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧ ತಮ್ಮ ಮುಂದಿನ ಆದೇಶಕ್ಕಾಗಿ ಕೋರಿ ಮಂಡಿಸಿದೆ.

(9)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬಿಬಿಎಂಪಿ ದೊಡ್ಡಬೆಲೆ ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಕಾಮಗಾರಿಯನ್ನು ಕೈಗೊಳ್ಳಲು ಅನುಮತಿ ಪುಟದ ಸಂಖ್ಯೆ —03—

ಯಲಹಂಕ ವಲಯ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.03 ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

2019–20ನೇ ಸಾಲಿನ ವಾರ್ಷಿಕ ಆಯವ್ಯಯದ ಲೆಕ್ಕಶೀರ್ಷಿಕೆ ಪಿ.1771 (POW) ರಡಿ ಮಂಜೂರಾಗಿರುವ ರೂ.20.00ಲಕ್ಷಗಳ ಕಾಮಗಾರಿಗೆ ಕಂಡಿಕೆ(09)ರಲ್ಲಿ ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯ ರವರು ಆಡಳಿತಾತ್ಮಕ ಅನುಮೋದನೆ ನೀಡಿದ್ದು ಅದರಂತೆ ಸದರಿ ಕಾಮಗಾರಿಗೆ ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ :ಬಿ12(1)ಪಿ.ಆರ್/394/2019–20 ದಿನಾಂಕ:25–2–2019 ರಂತೆ ನೀಡಿರುವ ಅಧಿಕಾರದನ್ವಯ ತಾಂತ್ರಿಕ ಮಂಜೂರಾತಿ ನೀಡಿದೆ ಹಾಗೂ ಸದರಿ ಕಾಮಗಾರಿಗೆ ಡಿ.ಟಿ.ಎಸ್. ಅನುಮೋದನೆ ನೀಡಲು ತಮ್ಮ ಮುಂದಿನ ಆದೇಶ ಕೋರಿ ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು,
ಯಲಹಂಕ ವಿಭಾಗ

(10) ಮುಖ್ಯ ಅಭಿಯಂತರರು (ಯ.ವ)

DTS ಅನುಮೋದನೆ ಕೋರಿ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

(11) ಮು.ಅ (ಯ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ : .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– Providing and Maintenance of borewells, water supply and pipelines at Ananthpura village, Balaji layout, DUO Marvel, Prakruthi Layout, Ananthpura and surrounding areas in ward no 03, Attur ಎಂಬ ಕಾಮಗಾರಿಯಟೆಂಡರ್ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ:

(12) 1. ಕಾಮಗಾರಿಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/ 01/2020-21 dated: 02-05-2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ2019–20ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ನಂ–03ರ ವ್ಯಾಪ್ತಿಯಲ್ಲಿ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲು ಈ ಕೆಳಕಂಡ ಕಾಮಗಾರಿಗೆ ಜಾಬ್ ಸಂಖ್ಯೆ003–20–000245 ರಂತೆ ದೊರೆತಿರುತ್ತದೆ. ವಿವರ ಈ ಕೆಳಕಂಡಂತಿದೆ.

(13)

Sl No	Name of work	Estimate cost Rs in Lakhs
01	Providing and Maintenance of borewells, water supply and pipelines at Ananthpura village, Balaji layout, DUO Marvel, Prakruthi Layout, Ananthpura and surrounding areas in ward no 03, Attur	20.00
	Total	20.00

(14) ಈ ಮೇಲ್ಕಂಡಕಾಮಗಾರಿಗೆ 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ಪರಿಷ್ಕೃತ ದರಗಳನ್ವಯ ರೂ.20.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಮುಖ್ಯಅಭಿಯಂತರರು ಯಲಹಂಕ ವಲಯರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ ಹಾಗೂ ಮಾನ್ಯಆಯುಕ್ತರು ಬಿ.ಬಿ.ಎಂ.ಪಿ ರವರು ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ ಬಿ 12 (1) ಪಿ.ಆರ್/394/ 2019–20 ದಿನಾಂಕ: 25–9–2019 ರಂತೆರೂ. 20.00 ಲಕ್ಷಗಳೊಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವ ಅಧಿಕಾರವು ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಇರುವುದರಿಂದ ಈ ಮೇಲ್ಕಂಡ ಕಾಮಗಾರಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದ್ದು, ಮುಖ್ಯಅಭಿಯಂತರರು ಯಲಹಂಕ ವಲಯರವರು ಕರಡುಟೆಂಡರ್ ಷೆಡ್ಯೂಲ್‌ಗೆ ಅನುಮೋದನೆ ನೀಡಿರುತ್ತಾರೆ.

(15) ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1)ರಂತೆದಿನಾಂಕ: 31–01–2020ರಂದು KTPP.Act Standard Tender Document ಅನುಸಾರE-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ವಿಜಯಕರ್ನಾಟಕ ದಿನ ಪತ್ರಿಕೆಯಲ್ಲಿ ದಿನಾಂಕ:3–5–2020 ರಂದು ಪ್ರಕಟಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪತ್ರಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸದರಿಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Providing and Maintenance of borewells, water supply and pipelines at Ananthpura village, Balaji layout, DUO Marvel, Prakruthi Layout, Ananthpura and surrounding areas in ward no 03, Attur
2	ಅಂದಾಜು ಮೊತ್ತ	ರೂ. 20.00ಲಕ್ಷಗಳು
3	ಇಂಡೆಂಟ್ ನಂ	BBMP/2020-21 / OW/ Work_ INDENT 41490.
3	ಅನುದಾನದಯೋಜನೆ ಹೆಸರು	2019–20ನೇ ಸಾಲಿನ ಆಯವ್ಯಯ
4	ಲೆಕ್ಕಶಿರ್ಷಿಕೆ	ಪಿ– 1771
5	ಅಡಳಿತಾತ್ಮಕ ಅನುಮೋದನೆ	ಮುಖ್ಯಅಭಿಯಂತರರುಯಲಹಂಕ ವಲಯರವರಿಂದ ಪಡೆಯಲಾಗಿದೆ.
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ.20.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆಬ್ಯ.ಬೆಂ.ಮ.ಪಾ/ಕಾ.ಅ/ತಾ.ಮಂ / ಯ.ವಿ./24/ 2020–21 ದಿನಾಂಕ 12–4–2020.
8	ಟೆಂಡರ್‌ಗೆಇಟ್ಟ ಮೊತ್ತ	ರೂ. 19,41,552.00
9	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರಟೆಂಡರ್ ಸಲ್ಲಿಸಲುಕೊನೆಯ ದಿನಾಂಕ.	21-05-2020upto 16.00 hrs
10	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರಟೆಂಡರ್‌ತೆರೆಯುವ ದಿನಾಂಕ	22-05-2020 after 16.00 hrs

(16)

(17) ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ: 22–05 2020 ರಂದು ಟೆಂಡರ್ ಅನ್ನು ತೆರೆಯಲಾಗಿದ್ದು, ಸದರಿಟೆಂಡರ್‌ನಲ್ಲಿ ಮೂರು ಗುತ್ತಿಗೆದಾರರು ಬಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri Pradeepa K A
2. Sri Renuka S
3. Sri Adinarayanareddy (Adi Electricals)

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, ಮೂರು ಗುತ್ತಿಗೆದಾರರು ಸಹ ಒಟ್ಟು ಇ.ಎಂ.ಡಿ ಮೊತ್ತರೂ. 50000–00 ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಾವತಿಸಿರುತ್ತಾರೆ. ಅದರಂತೆ ಮೇಲ್ಕಂಡ ಮೂರು ಬಿಡ್ದುದಾರರು ನಮೂದಿಸಿರುವ ದರಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(18)

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ2018–19 ರಅನುಮೋದಿತ ದರಗಳಿಗೆ ಹೊಲಿಸಿದಾಗ.	ಟೆಂಡರ್‌ಗಿಟ್ಟ ಮೊತ್ತ 3–1–2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ.	ಗುತ್ತಿಗೆ ದಾರರು ನಮೂದಿಸಿರುವ ದರಗಳು	2018–19ನೇ ಸಾಲಿನ ಎಸ್.ಆರ್‌ಧ ರಗಳಿಗೆ ಹೋಲಿಸಿದಾಗ ಶೇಕಡ ವಾರು	ದಿನಾಂಕ: 3–1–2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ	ಪಠಾ
01	Sri Pradeepa K A	19,41,552.00	19,41,552.00	18,54,981.22	(-)4.45%	(-)4.45%	
02	Sri Renuka s			18,63,887.76	(-)4.00%	(-)4.00%	
03	Sri Adinarayana Reddy (Adi Electricals)			19,01,553.00	(-)2.06%	(-)2.06%	

(19)

ಮೇಲ್ಕಂಡ ಮೂರು ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri Pradeepa K A ರವರು ನಮೂದಿಸಿರುವ ರೂ18,54,981.22 ಗಳು ಅತಿಕಡಿಮೆದರಗಳಾಗಿರುತ್ತದೆ.

ಆದುದರಿಂದ ಗುತ್ತಿಗೆದಾರರಾದ Sri Pradeepa K A ರವರು ನಮೂದಿಸಿರುವ ರೂ. 18,54,981.22 ಗಳು ಅತಿಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018–19 ಸಾಲಿನ ದರಗಳಿಗೆ ಹಾಗೂ ದಿನಾಂಕ :03–01–2020 ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ(–)4.45%ರಷ್ಟು ಕಡಿಮೆದರಗಳನ್ನು ನಮೂದಿಸಿ ಅರ್ಹಗುತ್ತಿಗೆ ದಾರರಾಗಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಅರ್ಹಗುತ್ತಿಗೆದಾರರಾದ Sri Pradeepa K A ರವರು ನಮೂದಿಸಿರುವ ದರರೂ.18,54,981.22 ಗಳನ್ನು ಪರಿಷ್ಕೃತದರಪಟ್ಟಿಗೆ ಹೋಲಿಸಿದಾಗ ಶೇಕಡ(–)4.45%ರಷ್ಟು ಕಡಿಮೆಯಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

03/06/2020

ಕಾರ್ಯಪಾಲಕಅಭಿಯಂತರರು
ಯಲಹಂಕ ವಿಭಾಗ

(20)

ಮುಖ್ಯಅಭಿಯಂತರರು (ಯಲಹಂಕ ವಲಯ)